ಆ ಒರಟು ವರ್ತನೆ... "ಮರದಿವಸನ ಕಿಟ್ಟಿ ಅಪ್ಪನ ಜೋಡಿ ಬೆಳಗಾವಿಗೆ ಛತ್ರೆ ಆಸ್ಪತ್ರಿಗೆ ನನ್ನ ಜೋಡಿ ಬಂದಾಂವಾ ತಿರಗಿ ಬಂದದ್ದು ಎರಡು ತಿಂಗಳು ಇವರು ಆರಾಮಾದ ಮ್ಯಾಲೆ... ಆವಾಗ ನೀ ಎರಡ ತಿಂಗಳ ಬಸರೆಂಗ್ಸು..'' ಎಂದು ಭಾಗಕ್ಕ ಮುಂದುವರೆಸಿದಾಗ ಭೂಮಿ ಇಬ್ಭಾಗವಾಗಿ ತನ್ನನ್ನು ನುಂಗಬಾರದೇ ಎನಿಸಿತ್ತು. ಹಾಗಾದರೆ ಸಮೀರ...

ಭಾಗಕ್ಕ, "ಕಿಟ್ಟಿ ಹದಿನಾಲ್ಕು ವರ್ಷದಾಂವಿದ್ದಾಗ ಮಾವಿನ ಗಿಡದ ಮ್ಯಾಲಿಂದ ಅರವಿ ವಗ್ಯೋ ಕಲ್ಲಿನ ಮ್ಯಾಲೆ ಬಿದ್ದಿದ್ದಾ. ಕೆಳಹೊಟ್ಟಿಗೆ ಪೆಟ್ಟು ಹತ್ತಿ ಎಂಟ ದಿವ್ಸ ನೆರಳಿದ್ದಾ. ಡಾಕ್ಟರ್ ಆವಾಗನ 'ಇಂವಗ ಮಕ್ಕಳಾಗೋದು ತ್ರಾಸು' ಅಂದಿದ್ದರು. ಹಂಗ ನಿನಗ ಮುಂದ ಫಲ ಸಿಗಲೇ ಇಲ್ಲ" ಎಂದು ಮುಂದುವರೆಸಿದರು. ಪದ್ಮ ಮುಖ ಮುಚ್ಚಿಕೊಂಡು, "ಹಂಗಾರ ನಾ ಧೊಡ್ಡ ತಪ್ಪು ಮಾಡಿದೆನಲ್ರಿ ಅತ್ತೆವರ... ಬದುಕೋ ಹಕ್ಕ ಇಲ್ಲ ನನಗ..." ಎಂದು ಅಳಲಾರಂಭಿಸಿದಳು. ಭಾಗಕ್ಕ ಸಂತೈಸುತ್ತ, "ಛೀ! ಹುಚ್ಚಿ... ಸುಮ್ಮನ ಕೂಡು. ಎಂದಿಂದೋ ಕಥಿ ಮನಸ್ನ್ಯಾಗ ಇಟಗೋಬ್ಯಾಡಾ. ನಿನಗ ಅರಿವಿಲ್ಲದ ನಡದದ ಅದು. ನೀ ಗಂಗಾನಷ್ಟ ಪರಿಶುದ್ಧ ಇದ್ದೀದಿ. ಇದನ್ನ ಕಿಟ್ಟಿ ಮುಂದ ಹೇಳಬ್ಯಾಡಾ. ಸುಮ್ಮನ ಸಂಶಯಕ್ಕ ಹಾದಿಯಾಗ್ತದ. ಭಂಗಾರದಂಥಾ ಹುಡುಗ ಸಮೀರ. ಮುಂದ ನಿಮ್ಮಿಬ್ಬರನ್ನೂ ಛೊಲೋ ನೋಡಕೋತಾನ. ಹಳೇ ರಾಡಿ ಕೆದಕಬ್ಯಾಡಾ" ಎಂದು ಮೈದಡವಿದರು. "ಇಷ್ಟು ದಿವ್ಸಾ ಈ ಕೆಂಡಾನ ನನ್ನ ಉಡಿಯೊಳಗಿಟಗೊಂಡು ವದ್ದ್ಯಾಡ್ತಿಕ್ಕತ್ತಿದ್ದೆ. ಈಗ ಸಮಾಧಾನ ಆತು ನೋಡು..." ಎಂದು ಭಾಗಕ್ಕ ಹೇಳುತ್ತ ಕಣ್ಣೊರೆಸಿಕೊಂಡರು. ಕೃಷ್ಣ ಊಟ ಮುಗಿಸಿಕೊಂಡು ಬರುವುದನ್ನು ಕಂಡು ಇಬ್ಬರೂ ಸುಮ್ಮನಾದರು. ರಿಕ್ಷಾ ಹಿಡಿದು ಮನೆಗೆ ಬಂದರು.

ಮರುದಿನ 'ಕರಾಗ್ರೇ ವಸತೇ' ಹೇಳಿಕೊಂಡು ಏಳುವಾಗ ಬೆಳ್ಳಂಬೆಳಗು ಕಂಡು ಗಾಬರಿಯಾದರು ಭಾಗಕ್ಕ. ಲಗುಬಗೆಯಿಂದ ತುಸು ಕುಂಟುತ್ತ, "ಪದ್ಮಾ... ಯಾಕೋ ಎಚ್ಚರನ ಆಗ್ಲಿಲ್ಲಾ. ತಡಾ ಆತು. ವಾಸಣ್ಣನ ಶ್ರಾದ್ಧ ಇವತ್ತ..." ಎನ್ನುತ್ತ ಒಳಬಂದರು. ಆಗಲೇ ಮೈತೊಳೆದು ಬಂದ ಪದ್ಮ ಮಡಿ ಅಡಿಗೆಗಾಗಿ ಇದ್ದಿಲೊಲೆ ಹೊತ್ತಿಸಲು ಕೆಂಡ ಮಾಡುತ್ತಿದ್ದಳು. "ನೋಡಿದೆ ಅತ್ತೆವರ... ನೀವು ಜೋರಾಗಿ ಗೊರಕಿ ಹೊಡೀಲಿಕ್ಕತ್ತಿದ್ರಿ. ನಿಮ್ಮ ಉಡ್ಯಾಗಿನ ಕೆಂಡಾ ತಗದು ಒಲ್ಯಾಗ ಹಾಕೇನಿ. ಇನ್ನ ನಿಶ್ಚಿಂತ್ಯಾಗಿರ್ರಿ. ಹನ್ನೆರೆಡು ಘಂಟೆಕ್ಕ ಆಚಾರ್ರು ಬರ್ತಾರ. ವಾಸಣ್ಣ ಭಾವಜಿ ಶ್ರಾದ್ಧಕ್ಕನ..." ಎಂದು ನಸುನಕ್ಕಳು. ತಲೆಯ ಮೇಲಿನ ದೊಡ್ಡ ಹೊರೆ ಇಳಿದಂತಾಗಿ... ಮನಸ್ಸು ಹಗುರವಾಗಿ ಸೊಸೆಯತ್ತ ಪ್ರೀತಿಯಿಂದ ನೋಡಿದರು ಭಾಗಕ್ಕ.


**ಮಧುರಾ ಕರ್ಣಮ್**

ಲೇಖಕಿ ಮಧುರಾ ಬೆಳಗಾವಿಯವರು. ವಿದ್ಯಾಭ್ಯಾಸ – ಬಿ.ಎಸ್ಸಿ., ಎಲ್‌ಎಲ್‌ಬಿ. ಕತೆ, ಪ್ರಬಂಧ, ಹಾಸ್ಯಬರಹಗಳನ್ನು ಬರೆದಿದ್ದಾರೆ. 'ಮರಳಿ ಬಂದನಾ ವಸಂತ', 'ಋಣ', 'ಅವಳ ಭಾವಗಳ ಸುತ್ತ', 'ಗುಂಡಪುರಾಣ', 'ಜೀವಧಾರಾ... ನಿರಂತರಾ...', 'ಆಕ್ರಮಣ' ಸೇರಿದಂತೆ ಹನ್ನೊಂದು ಕೃತಿಗಳನ್ನು ಪ್ರಕಟಿಸಿದ್ದಾರೆ. ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿದ್ದಾರೆ.